## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಭವಿಷ್ಯ ನಿಧಿ ಚಂದಾದಾರನ ಗಂಡ/ಹೆಂಡತಿ ಹೆಸರಿನಲ್ಲಿ ಮನೆ/ನಿವೇಶನ ಖರೀದಿಸಲು, ಮನೆ ನಿರ್ಮಾಣ, ಸ್ವಾಧೀನ ಮತ್ತು ಪುನರ್ ನಿರ್ಮಾಣದ ವೆಚ್ಚವನ್ನು ಭರಿಸುವ ಉದ್ದೇಶಕ್ಕಾಗಿ ಸಾಮಾನ್ಯ ಭವಿಷ್ಯ ನಿಧಿಯಿಂದ ಅಂಶಿಕ ಅಂತಿಮ ಹಣವನ್ನು ಹಿಂಪಡೆಯಲು ಮಂಜೂರಾತಿ ನೀಡುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 24ರಡಿ ಸಾಮಾನ್ಯ ಭವಿಷ್ಯ ನಿಧಿಗೆ ಚಂದಾದಾರರಾಗಿರುವ ಸರ್ಕಾರಿ ನೌಕರರುಗಳಿಗೆ ಕೆಲವೊಂದು ನಿರ್ದಿಷ್ಟ ಉದ್ದೇಶ ಗಳಿಗಾಗಿ ಸಾಮಾನ್ಯ ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದಿಂದ ಅಂಶಿಕ ಅಂತಿಮವಾಗಿ ಹಣವನ್ನು ಹಿಂತೆಗೆದುಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳಡಿ ಚಂದಾದಾರನ ಮಾಲೀಕತ್ವದಲ್ಲಿರುವ ಮನೆಗೆ ಮಾತ್ರ ಮನೆ ನಿರ್ಮಾಣ, ಸ್ವಾಧೀನ, ಪುನರ್ ನಿರ್ಮಾಣ ಅಥವಾ ಋಣ ವಿಮೋಚನೆಗಾಗಿ ಅಂಶಿಕ ಅಂತಿಮವಾಗಿ ಹಣವನ್ನು ಹಿಂಪಡೆಯಲು ಅವಕಾಶವಿದೆ.

ಕೇಂದ್ರ ಸರ್ಕಾರದ ಭವಿಷ್ಯ ನಿಧಿ ನಿಯಮಗಳ ಪ್ರಕಾರ ಗಂಡ/ಹೆಂಡತಿಯು ಭವಿಷ್ಯ ನಿಧಿಗೆ ನಾಮನಿರ್ದೇಶಿಸಿದ ವ್ಯಕ್ತಿಗಳ ಪೈಕಿ ಮೊದಲನೇ ವ್ಯಕ್ತಿಯಾಗಿದ್ದಲ್ಲಿ ಮಾತ್ರ, ಚಂದಾದಾರನ ಗಂಡ/ಹೆಂಡತಿಯ ಹೆಸರಿನಲ್ಲಿ ಮನೆ/ನಿವೇಶನ ಖರೀದಿಸಲು, ಪುನರ್ ನಿರ್ಮಿಸಲು ಅಂಶಿಕ ಅಂತಿಮವಾಗಿ ಹಣವನ್ನು ಹಿಂಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ.

ಆದರೆ ಇತ್ತೀಚೆಗೆ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರಡಿಯಲ್ಲಿಯೂ ಸಹ ಸಾಮಾನ್ಯ ಭವಿಷ್ಯ ನಿಧಿ ಚಂದಾದಾರರ ಗಂಡ/ಹೆಂಡತಿ ಹೆಸರಿನಲ್ಲಿ ಮನೆ/ನಿವೇಶನ ಖರೀದಿಸುವ ವೆಚ್ಚವನ್ನು ಭರಿಸುವ ಉದ್ದೇಶಕ್ಕಾಗಿ ಅಂಶಿಕ ಅಂತಿಮ ಹಣವನ್ನು ಹಿಂಪಡೆಯಲು ಅನೇಕ ಕೋರಿಕೆಗಳು ಬರುತ್ತಿವೆ. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಗಂಡ/ಹೆಂಡತಿ ಹೆಸರಿನಲ್ಲಿ ಮನೆ ನಿರ್ಮಾಣ, ಸ್ವಾಧೀನ, ಪುನರ್ ನಿರ್ಮಾಣ ಅಥವಾ ಋಣ ವಿಮೋಚನೆಗಾಗಿ ಅಂಶಿಕ ಅಂತಿಮ ಹಣ ಹಿಂಪಡೆಯುವ ಬಗ್ಗೆ ಸಾಮಾನ್ಯ ಭವಿಷ್ಯ ನಿಧಿ ಚಂದಾದಾರರಿಂದ ಬರಬಹುದಾದ ಕೋರಿಕೆಗಳನ್ನು, ಕೇಂದ್ರ ಸರ್ಕಾರದ ಭವಿಷ್ಯ ನಿಧಿ ನಿಯಮಗಳ ಪ್ರಕಾರ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮ ಗಳಿಗೆ ಪೂರಕ ತಿದ್ದುಪಡಿ ಪ್ರಕಿಯೆ ಪೂರ್ಣಗೊಳ್ಳುವವರೆಗೆ ಪರಿಗಣಿಸುವುದು ಸಮಂಜಸವೆಂದು ಸರ್ಕಾರ ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 17 ಮುಭನಿ 2009,**
**ಬೆಂಗಳೂರು, ದಿನಾಂಕ: 22ನೇ ನವೆಂಬರ್, 2010.**

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರಡಿ ಖಾತೆಯಲ್ಲಿರುವ ಹಣವನ್ನು ಸ್ವೀಕರಿಸಲು ಚಂದಾದಾರನ ಗಂಡ/ಹೆಂಡತಿ ಮೊದಲ ನಾಮ ನಿರ್ದೇಶಿತ ವ್ಯಕ್ತಿಯಾಗಿದ್ದಲ್ಲಿ ಮಾತ್ರ, ಅಂತಹ ವ್ಯಕ್ತಿಯ ಹೆಸರಿನಲ್ಲಿ ಮನೆ/ನಿವೇಶನ ಖರೀದಿಸಲು, ಮನೆ ನಿರ್ಮಿಸಲು, ಪುನರ್ ನಿರ್ಮಿಸಲು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದಲ್ಲಿ ನಿಯಮಾನುಸಾರ ಅಂಶಿಕ ಅಂತಿಮವಾಗಿ ಹಣವನ್ನು ಹಿಂಪಡೆಯಲು ಸರ್ಕಾರ ಅನುಮತಿ ನೀಡಿ ಆದೇಶಿಸಿದೆ.

... 2

ಈ ಆದೇಶವು ತಕ್ಷಣದಿಂದ ಜಾರಿಗೆ ಬರತಕ್ಕದ್ದು ಮತ್ತು ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳಿಗೆ ಅಗತ್ಯ ತಿದ್ದುಪಡಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎನ್.ಶ್ರೀನಿವಾಸ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಇವರಿಗೆ:

ಸಂಕಲನಕಾರರು, ರಾಜ್ಯ ಪತ್ರ, ಬೆಂಗಳೂರು - ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಮತ್ತು 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ (ಮುಂಗಡ) ಕಳುಹಿಸಿಕೊಡುವಂತೆ ಕೋರಲಾಗಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ & ತನಿಖೆ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ಅಮುಕಾ ಮತ್ತು ಅಭಿವೃದ್ಧಿ ಅಧಿಕಾರಿಗಳು, ವಿಧಾನ ಸೌಧ, ಬೆಂಗಳೂರು,
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
4. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು,
5. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,
6. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು,
7. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿಧಾನ ಮಂಡಲ, ಬೆಂಗಳೂರು,
8. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕೋರಮಂಗಲ, ಬೆಂಗಳೂರು,
9. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು,
10. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತಿಯ ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು
11. ಬಿಡಿ ಪ್ರತಿಗಳು/ಶಾಖಾ ರಕ್ಷಕ ಕಡತ/ಕಛೇರಿ ಪ್ರತಿ